ವಿಷಯ : ರಾಜ್ಯದಲ್ಲಿ ಪತ್ತೆಹಚ್ಚಿದ ಮಾದಕ ದ್ರವ್ಯದ ಪ್ರಕರಣಗಳು.

1503 (2044)-ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ 1996-97 ಹಾಗೂ 1997-98ರಲ್ಲಿ ಈವರೆಗೆ ಪತ್ತೆ ಹಚ್ಚಿದ ಮಾದಕ ದ್ರವ್ಯದ ಪ್ರಕರಣಗಳು ಎಷ್ಟು

ಆ) ಈ ಪ್ರಕರಣಗಳಲ್ಲಿ ಸ್ವಾಧೀನಪಡಿಸಿಕೊಂಡ ವಾಹನಗಳು ಎಷ್ಟು ಹಾಗೂ ಇವುಗಳಲ್ಲಿ ಎಷ್ಟನ್ನು ಬಿಡುಗಡೆಗೊಳಿಸಲಾಗಿದೆ, ಎಷ್ಟನ್ನು ಮುಟ್ಟುಗೋಲು ಹಾಕಲಾಗಿದೆ.

ಇ) ಈ ಪ್ರಕರಣಗಳಲ್ಲಿ ಎಷ್ಟು ಅಪರಾಧಿಗಳಿಗೆ ಶಿಕ್ಷೆ ವಿಧಿಸಲಾಗಿದೆ?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು)

ಅ) 1996-97ನೇ ಸಾಲಿನಲ್ಲಿ 5 ಪ್ರಕರಣಗಳು 1997-98ನೇ ಸಾಲಿನಲ್ಲಿ 1 ಪ್ರಕರಣ.

ಆ) ಯಾವ ವಾಹನವನ್ನು ಸ್ವಾಧೀನಪಡಿಸಿ ಕೊಂಡಿರುವುದಿಲ್ಲ.

ಇ) ಪ್ರಕರಣಗಳು ತನಿಖೆಯ ಹಂತದಲ್ಲಿರುವ ಕಾರಣ ಯಾವುದೇ ಆಪಾದಿತ ವ್ಯಕ್ತಿಗೆ ಶಿಕ್ಷೆ ಆಗಿರುವುದಿಲ್ಲ.

ರಾಯಚೂರು ಜಿಲ್ಲೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಕೈಗೊಂಡ ಕಾಮಗಾರಿಗಳು

1505 (2087)-ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ರಾಯಚೂರು ಜಿಲ್ಲೆಯ ಯಲಬುರ್ಗಾ ಕೊಪ್ಪಳ ಕುಷ್ಟಗಿಯಲ್ಲಿ 1993-94, 1994-95, 1995-96, 1996-97 ಮಾರ್ಚ್ 31ರ ವರೆಗೆಈ ನಾಲ್ಕು ವರ್ಷಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿಯವರ ಯೋಜನೆಯಲ್ಲಿ ಶಾಸಕೇತರ ಮತ್ತು ಶಾಸಕರ ಅನುದಾನದಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳೆಷ್ಟು (ಖರ್ಚು ಮಾಡಿದ ಹಣದ ವಿವರ ನೀಡುವುದು)

2. ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ (ಮಾಹಿತಿ ಒದಗಿಸುವುದು)

ಶ್ರೀ ಕೆ. ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಮಂತ್ರಿಗಳು)

1) ವಿವರಗಳು ಅನುಬಂಧ 1-ರಲ್ಲಿನೀಡಲಾಗಿದೆ.

2) ಈ ಕಳೆದ ನಾಲ್ಕು ವರ್ಷದಲ್ಲಿ, ಈ ಮೂರು ತಾಲ್ಲೂಕುಗಳಲ್ಲಿ 879 ಕಾಮಗಾರಿಗಳನ್ನು ತೆಗೆದುಕೊಂಡಿದ್ದು ಇದರಲ್ಲಿ 692 ಕಾಮಗಾರಿಗಳನ್ನು ಪೂರ್ತಿಗೊಳಿಸಲಾಗಿದೆ. ಉಳಿದ 187 ಕಾಮಗಾರಿಗಳು ವಿವಿಧ ಹಂತದಲ್ಲಿದೆ.

ವಿಷಯ : ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ವತಿಯಿಂದ ಕೈಗೊಂಡ ಕಾಮಗಾರಿಗಳು

1506 (2022)-ಶ್ರೀವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1995-96, 1996-97ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಯೋಜನೆಯನ್ವಯ ಸರ್ಕಾರದವರು ಎಷ್ಟು ಕಾಮಗಾರಿಗಳಿಗೆ ಮಂಜೂರಾತಿ ನೀಡಿದ್ದಾರೆ

ಆ) ಅವುಗಳಲ್ಲಿ ಎಷ್ಟು ಕಾಮಗಾರಿಗಳನ್ನು ಸಂಪೂರ್ಣಗೊಳಿಸಲಾಗಿದೆ (ಜಿಲ್ಲಾವಾರು ವಿವರಗಳನ್ನು ನೀಡುವುದು)

ಇ) ಮಂಡಳಿಗೆ ನೀಡಿರುವ ಅನುದಾನವು ಕಡಿಮೆ ಯಾಗಲು ಕಾರಣಗಳೇನು ?

ಶ್ರೀ ಕೆ. ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಮಂತ್ರಿಗಳು)

ಅ) ವಿವರಗಳನ್ನು ಅನುಬಂಧ - 1ರಲ್ಲಿ ನೀಡಲಾಗಿದೆ

ಆ) ಮಂಡಳಿಗೆ ನೀಡಿರುವ ಅನುದಾನದಲ್ಲಿ ಕಡಿಮೆಯಾಗಿರುವುದಿಲ್ಲ 1995-93 ಹಾಗೂ 96-97ನೇ ಸಾಲಿನ ಆಯವ್ಯಯದಲ್ಲಿ 30 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ.